# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆ/ಬಿಬಿಎಂಪಿ/ಪಿಆರ್/ 9-1451 /2016-17

ಆಯುಕ್ತರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ: 28.05.2016.

## ಕಛೇರಿ ಆದೇಶ

ವಿಷಯ: ವಲಯ ಅಪರ/ಜಂಟಿ ಆಯುಕ್ತರವರು ಘನತ್ಯಾಜ್ಯ ಸಂಸ್ಕರಣಾ/ವಿಲೇವಾರಿ ಘಟಕಗಳ ನಿರ್ವಹಣೆ ಮಾಡುವ ಬಗ್ಗೆ

ಉಲ್ಲೇಖ: 1. ಈ ಕಛೇರಿ ಪತ್ರದ ಸಂ.ಆ/ಪಿ.ಆರ್./662/2015-16 ದಿನಾಂಕ 26-12-15.
2. ಈ ಕಛೇರಿ ಆದೇಶ ಸಂ.ಬಿ12/(6)/ಪಿಆರ್/11/16-17 ದಿ: 11-04-2016

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರಂತೆ ಘನತ್ಯಾಜ್ಯ ನಿರ್ವಹಣೆ ಘಟಕಗಳ ಉಸ್ತುವಾರಿ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ದಿನಾಂಕ-26-12-2015ರಲ್ಲಿ ಈ ಕಛೇರಿ ಆದೇಶ ಹೊರಡಿಸಲಾಗಿದೆ.

ಆಯುಕ್ತರು ಬಿಬಿಎಂಪಿರವರ ಕಛೇರಿ ಆದೇಶ ಸಂ.ಬಿ12/(6)/ಪಿಆರ್/11/16-17 ದಿ: 11-04-2016ರಲ್ಲಿ ಎಂಟು(8) ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲು ಘನತ್ಯಾಜ್ಯ ನಿರ್ವಹಣೆ ಘಟಕಗಳನ್ನು ವಹಿಸಲಾಗಿದೆ.

ಘಟಕಗಳ ಸುವ್ಯವಸ್ಥಿತ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ಈ ಕೆಳಕಂಡ ವಲಯ ಅಪರ /ಜಂಟಿ ಆಯುಕ್ತರವರನ್ನು ಪಟ್ಟಿಯಲ್ಲಿ ತೋರಿಸಿರುವ ಘನತ್ಯಾಜ್ಯ ನಿರ್ವಹಣೆ ಘಟಕಗಳ ಉಸ್ತುವಾರಿಗೆ ನಿಯೋಜಿಸಲಾಗಿದೆ.

| ಕ್ರಮ ಸಂ. | ವಲಯ ಅಪರ/ಜಂಟಿ ಆಯುಕ್ತರು | ಉಸ್ತುವಾರಿಗಾಗಿ ನಿಯೋಜಿಸಲಾಗಿರುವ ಘಟಕಗಳು |
|---|---|---|
| 1 | ರಾಜರಾಜೇಶ್ವರಿನಗರ | ಸೀಗೆಹಳ್ಳಿ |
| 2 | ದಕ್ಷಿಣ | ಕನ್ನಹಳ್ಳಿ |
| 3 | ದಾಸರಹಳ್ಳಿ | ದೊಡ್ಡಬಿದರಕಲ್ಲು |
| 4 | ಪೂರ್ವ | ಚಿಕ್ಕನಾಗಮಂಗಲ |
| 5 | ಬೊಮ್ಮನಹಳ್ಳಿ | ಕೆ.ಸಿ.ಡಿ.ಸಿ |
| 6 | ಪಶ್ಚಿಮ | ಲಿಂಗಧೀರನಹಳ್ಳಿ ಮತ್ತು ಸುಬ್ಬರಾಯ್ಯನಪಾಳ್ಯ |
| 7 | ಯಲಹಂಕ | ಮಾವಳ್ಳಿಪುರ |
| 8 | ಪೂರ್ವ | ಎಂ.ಎಸ್.ಜಿ.ಪಿ. |

ಈಗಾಗಲೇ ಉಲ್ಲೇಖ (2)ರಲ್ಲಿ ನಿಯೋಜಿಸಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರು ಮೇಲ್ಕಂಡ ಘಟಕಗಳಲ್ಲಿ ತ್ಯಾಜ್ಯ ನಿರ್ವಹಣೆ ಹಾಗೂ ವಿಲೇವಾರಿಗೆ ಸಂಬಂಧಿತ ಸಂಪೂರ್ಣ ಚಟುವಟಿಕೆಗಳನ್ನು ಮೇಲುಸ್ತುವಾರಿ ಮಾಡುವುದು. ಈಗಾಗಲೇ ಕನ್ನಹಳ್ಳಿ, ಸೀಗೆಹಳ್ಳಿ, ದೊಡ್ಡಬಿದರಕಲ್ಲು, ಲಿಂಗಧೀರನಹಳ್ಳಿ ಮತ್ತು ಸುಬ್ಬರಾಯನಪಾಳ್ಯ

...2)

ಘಟಕಗಳಿಗೆ ಕಾರ್ಯಪಾಲಕ ಅಭಿಯಂತರವರು (ಘನತ್ಯಾಜ್ಯ ಘಟಕ) ರಾಜರಾಜೇಶ್ವರಿನಗರಕ್ಕೆ ನಿಯೋಜನೆಗೊಂಡಿರುತ್ತಾರೆ ಹಾಗೂ ಚಿಕ್ಕನಾಗಮಂಗಲ ಮತ್ತು ಕೆಸಿಡಿಸಿಗೆ ಘಟಕಗಳಿಗೆ ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ರವರ ತಾಂತ್ರಿಕ ಮಾರ್ಗದರ್ಶನದಲ್ಲಿ ಮುಂದುವರಿಯುವುದು ಹಾಗೂ ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರ ಮುಖೇನ ಘನತ್ಯಾಜ್ಯ ಘಟಕಗಳ ನಿರ್ವಹಣೆ ಕಾರ್ಯ ಚಟುವಟಿಕೆಗಳ ಕುರಿತು ಸಂಬಂಧಪಟ್ಟ ವಲಯದ ಜಂಟಿ ಆಯುಕ್ತರವರಿಗೆ ವರದಿ ಸಲ್ಲಿಸುವುದು.

ಅದರೆ ಈ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಹಾಗೂ ಸುತ್ತಮುತ್ತ ಇರುವ ಗ್ರಾಮಸ್ಥರ/ಸಾರ್ವಜನಿಕರ ಅಹವಾಲುಗಳನ್ನು ಪರಿಹರಿಸುವ ಕಾರ್ಯವನ್ನು ಈಗಾಗಲೇ ತಮ್ಮ ವಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳೊಂದಿಗೆ ಕೆಳಕಂಡ ಅಪರ/ಜಂಟಿ ಆಯುಕ್ತರು ಕಾಯನಿರ್ವಹಿಸತಕ್ಕದ್ದು.

| ಕ್ರಮ ಸಂ. | ವಲಯ ಅಪರ/ಜಂಟಿ ಆಯುಕ್ತರು | ಘನತ್ಯಾಜ್ಯ ನಿರ್ವಹಣಾ ಘಟಕಗಳು |
|---|---|---|
| 1 | ರಾಜರಾಜೇಶ್ವರಿ ನಗರ | ಸೀಗೆಹಳ್ಳಿ, ಕನ್ನಹಳ್ಳಿ, ದೊಡ್ಡಬಿದರಕಲ್ಲು, ಸುಬ್ಬರಾಯನಪಾಳ್ಯ ಹಾಗೂ ಲಿಂಗಧೀರನಹಳ್ಳಿ |
| 2 | ಬೊಮ್ಮನಹಳ್ಳಿ | ಕೆ.ಸಿ.ಡಿ.ಸಿ. ಮತ್ತು ಚಿಕ್ಕನಾಗಮಂಗಲ |
| 3 | ಯಲಹಂಕ | ಮಾವಳ್ಳಿಪುರ |
| 4 | ಪೂರ್ವ | ಎಂ.ಎಸ್.ಜಿ.ಪಿ. |

ಈ ಕಛೇರಿ ಆದೇಶವು ಇಂದಿನಿಂದಲೇ ಜಾರಿಗೆ ಬಂದಿರುತ್ತದೆ. ಕೈಗೊಂಡ ಕ್ರಮದ ಬಗ್ಗೆ ಪಾಲನಾ ವರದಿಯನ್ನು ಈ ತಿಂಗಳ 31-05-2016ರೊಳಗೆ ಸಲ್ಲಿಸುವುದು.

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು

1. ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಉಪ ಮಹಾಪೌರರು ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ವಿಶೇಷ ಆಯುಕ್ತರು (ಆ/ಘ.ತ್ಯಾ.ನಿ.)/ಹಣಕಾಸು ರವರಿಗೆ ಮುಂದಿನ ಕ್ರಮಕ್ಕಾಗಿ.
5. ಜಂಟಿ ಆಯುಕ್ತರು (ಘ.ತ್ಯಾ.ನಿ.) ರವರಿಗೆ ಮುಂದಿನ ಕ್ರಮಕ್ಕಾಗಿ.
6. ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು (ಘ.ತ್ಯಾ.ನಿ.) ರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
7. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
8. ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
9. ಎಲ್ಲಾ ವಲಯದ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
10. ಕಾರ್ಯಪಾಲಕ ಅಭಿಯಂತರು, (ಘನತ್ಯಾಜ್ಯ ಘಟಕ) ರಾಜರಾಜೇಶ್ವರಿನಗರ ಮತ್ತು ಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ.
11. ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
12. ಕಛೇರಿ ಕಡತಕ್ಕೆ.